ಈಶ್ವರನ ಪೂಜೆಗೂ ರುದ್ರಾಧ್ಯಯ ಎನಿಸಿಕೊಂಡಿರುವ ನಮಕ–ಚಮಕ ಪಾರಾಯಣಕ್ಕೂ ಅವಿನಾಭಾವ ಸಂಬಂಧ. ತಲೆಯ ಮೇಲೆ ಗಂಗೆಯೇ ಇದ್ದರೂ ಮುಕ್ಕಣ್ಣ ಮಾತ್ರ ಅಭಿಷೇಕ ಪ್ರಿಯ. ರುದ್ರಸೂಕ್ತ ಪಾರಾಯಣವಿಲ್ಲದೇ ಅಭಿಷೇಕ ಕಳೆಗಟ್ಟುವುದೇ? ರುದ್ರಸೂಕ್ತ ಪಾರಾಯಣದೊಂದಿಗೆ ಶಿವಲಿಂಗಕ್ಕೆ ಮಾಡುವ ಅಭಿಷೇಕವನ್ನು ರುದ್ರಾಭಿಷೇಕ ಎಂದು ಕರೆಯುತ್ತಾರೆ. ಶಿವರಾತ್ರಿಯಂದು ನಡೆಯುವ ಯಾಮಪೂಜೆಗಳಲ್ಲಿ ರುದ್ರಾಭಿಷೇಕ ಸೇವೆಯೂ ಸೇರಿದೆ. ಶಿವರಾತ್ರಿಯಂದು ನಡೆಯುವ ರುದ್ರ ಪಾರಾಯಣಕ್ಕೆ ವಿಶೇಷ ಮಾನ್ಯತೆ.

ವೇದವನ್ನು ಕ್ರಮಬದ್ಧವಾಗಿ ಅಭ್ಯಾಸ ಮಾಡಿ, ಸ್ವರ ಒಲಿಸಿಕೊಂಡು ಮಾಡುವ ಪಾರಾಯಣಕ್ಕೆ ಶ್ರದ್ಧೆಯಿಂದ ಕೇಳುವವರ ಮನಃಪಟಲದಲ್ಲಿ ಅದ್ಭುತ ಆವರಣವನ್ನು ಸೃಷ್ಟಿಸುವ ಸಾಮರ್ಥ್ಯವಿದೆ. ವೈದಿಕ ಸಂಸ್ಕೃತ ಅರ್ಥವಾಗದಿದ್ದರೂ, ಮಂತ್ರೋಚ್ಚಾರಣೆಯ ನಾದದ ಲಯದಲ್ಲಿ ಋಷಿಗಳು ಕಟ್ಟಿಕೊಡುವ ಭಾವನೆಗಳು ನಮ್ಮ ಮನಸ್ಸನ್ನು ತಟ್ಟುತ್ತವೆ.

‘ದೇವರು ಜಗತ್ತಿನ ಎಲ್ಲೆಡೆ ವ್ಯಾಪಿಸಿದ್ದಾನೆ, ಎಲ್ಲರಲ್ಲಿಯೂ ಇದ್ದಾನೆ, ಎಲ್ಲವೂ ಆಗಿದ್ದಾನೆ...’ ಎನ್ನುವುದು ವೇದಾಂತದ ಪ್ರತಿಪಾದನೆ. ‘ಎಲ್ಲೆಡೆ’, ‘ಎಲ್ಲರಲ್ಲಿ’ ಮತ್ತು ‘ಎಲ್ಲವೂ’ ಎನ್ನುವ ಈ ಮೂರು ಪರಿಕಲ್ಪನೆಗಳನ್ನು ಆಳವಾಗಿ ಪರಿಶೋಧಿಸುವ ಪ್ರಯತ್ನ ರುದ್ರಸೂಕ್ತದಲ್ಲಿದೆ. ರುದ್ರ ಎನ್ನುವ ಶಬ್ದಕ್ಕೆ ಜಗತ್ತಿನ ದುಃಖವನ್ನು ಹೊಡೆದೋಡಿಸುವವ (ರು–ದುಃಖ, ದ್ರಾ–ತಡೆಯುವವ) ಎನ್ನುವ ಅರ್ಥವಿದೆ. ಇಂಥವನನ್ನು ‘ಶಿವನಾಗು’ (ಮಂಗಳನಾಗು) ಎಂದು ಪ್ರಾರ್ಥಿಸುತ್ತದೆ ರುದ್ರಸೂಕ್ತ.

ರುದ್ರಾಧ್ಯಾಯವು ತೈತ್ತರೀಯ ಕೃಷ್ಣ ಯಜು ಸಂಹಿತೆಯ ನಾಲ್ಕನೇ ಕಾಂಡದ 5ನೇ ಪ್ರಪಾಠ. ಅದೇ ಕಾಂಡದ 7ನೇ ಪ್ರಪಾಠವಾದ ಚಮಕಪ್ರಶ್ನವನ್ನು ರುದ್ರದ ಜೊತೆಗೇ ಪಠಿಸುವುದು ವಾಡಿಕೆ. ರುದ್ರಾಧ್ಯಾಯದಲ್ಲಿ 11 ಅನುವಾಕಗಳಿವೆ (ಪ್ರಘಟ್ಟ–ಪ್ಯಾರಾ). ‘ನಮಃ’ ಶಬ್ದವು ನೂರಾರು ಬಾರಿ ಪುನರುಕ್ತವಾಗುವುದರಿಂದ ಇದನ್ನು ‘ನಮಕ’ ಎಂದೂ ಕರೆಯುತ್ತಾರೆ. ಚಮಕಪ್ರಶ್ನದಲ್ಲಿ ಚ ಮತ್ತು ಮೇ ಎಂಬ ಶಬ್ದಗಳು ಬಹಳ ಸಲ ಪುನರುಕ್ತಿಯಾಗಿವೆ. ಇದೇ ಕಾರಣಕ್ಕೆ ‘ಚಮೇ’ ಹೆಸರು ರೂಢಿಗೆ ಬಂದಿದೆ.

ರುದ್ರ ಪಾರಾಯಣ ಎಂದರೆ ನಮಕ ಮತ್ತು ಚಮಕಗಳೆರಡೂ ಸೇರುತ್ತವೆ. ಈ ಬರಹದಲ್ಲಿ ನಮಕದ ಅರ್ಥಾನುಸಂಧಾನ ಪ್ರಯತ್ನವನ್ನು ಮಾತ್ರ ಮಾಡಲಾಗಿದೆ.

## ಬ್ರಹ್ಮಾಂಡ ವ್ಯಾಪ್ತ ದೇಹ

ನಾನು ಮತ್ತು ನನ್ನದು ಎಂಬ ಅಹಂಕಾರಗಳನ್ನು ತ್ಯಾಗ ಮಾಡಿ, ನನಗಿಂತ ದೊಡ್ಡದಾದ ಮತ್ತೊಂದು ವಸ್ತುವಿದೆ ಎಂಬ ಭಾವ ತೀವ್ರತೆಯೇ ಶಬ್ದಗಳಾಗಿ ಹರಿದ ಮಂತ್ರ ಇದು. ಹೀಗಾಗಿಯೇ ರುದ್ರ ಎನ್ನುವುದು ನಮಸ್ಕಾರದ ನಮಕ.

ತನ್ನೆದುರು ಉದ್ದಾನುದ್ದ ನಿಂತು, ಬಲಿಷ್ಠ ತೋಳುಗಳಲ್ಲಿ ಬಿಲ್ಲುಬಾಣ ಧರಿಸಿದವನ ಎದುರು ಕೈಮುಗಿದ ಭಕ್ತ ‘ನಮಸ್ತೇ ರುದ್ರ ಮನ್ಯವ ಉತೋ ತ ಇಷವೇ ನಮಃ | ನಮಸ್ತೇ ಅಸ್ತು ಧನ್ವನೇ ಬಾಹುಭ್ಯಾಮುತ ತೇ ನಮಃ’ (ಎಲೈ ರುದ್ರನೇ ನಿನಗೆ ಮತ್ತು ನಿನ್ನ ಕೋಪಕ್ಕೆ ನಮಸ್ಕಾರ, ನಿನ್ನ ಬಾಣಗಳಿಗೆ, ಬಿಲ್ಲಿಗೆ ಮತ್ತು ತೋಳುಗಳಿಗೆ ನಮಸ್ಕಾರ) ಎಂದು ಬೇಡುವುದರೊಂದಿಗೆ ರುದ್ರಸೂಕ್ತ ಆರಂಭವಾಗುತ್ತದೆ. ಅಹಂಕಾರ ತ್ಯಾಗ ರುದ್ರದ ಮೊದಲ ಮಂತ್ರವೂ ಹೌದು. ಅಧ್ಯಾತ್ಮದ ಹಾದಿಯ ಮೊದಲ ಮೆಟ್ಟಿಲೂ ಹೌದು.

ರುದ್ರ ಸೂಕ್ತ ಪಾರಾಯಣಕ್ಕೆ ಮೊದಲು ಪಠಿಸುವ ಪ್ರಾರ್ಥನಾ ಶ್ಲೋಕಗಳು ರುದ್ರವು ಪ್ರತಿಪಾದಿಸುವ ದೇವತೆಗೆ ರೂಪವೊಂದನ್ನು ಕಟ್ಟಿಕೊಡುತ್ತದೆ. ಮೂಲದಲ್ಲಿ ಒಬ್ಬನೇ ಆದ ರುದ್ರನು ತನ್ನ ಮಹಿಮೆಗಳನ್ನು ನಾನಾರೂಪಗಳಿಂದ ಪ್ರಕಟಿಸಿಕೊಂಡು ಸಾವಿರಾರು ರೂಪಗಳನ್ನು ತಾಳುತ್ತಾನೆ. ಎಲ್ಲೆಡೆ, ಎಲ್ಲರಲ್ಲಿ ಮತ್ತು ಎಲ್ಲವೂ ಆಗಿಬಿಡುತ್ತಾನೆ. ಆ ರೂಪ ಹೇಗಿದೆ ಎಂಬುದನ್ನು ‘ಬ್ರಹ್ಮಾಂಡವ್ಯಾಪ್ತದೇಹಾ ಭಸಿತಹಿಮರುಚಾ ಭಾಸಮಾನಾ ಭುಜಙ್ಗೈಃ’ಎಂದು ಶುರುವಾಗುವ ಸಾಲುಗಳು ಕಟ್ಟಿಕೊಡುತ್ತವೆ.

‘ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿಕೊಂಡ ಶರೀರವುಳ್ಳವರು, ಹಿಮದಂತೆ ಬಿಳುಪಾದ ವಿಭೂತಿಯಿಂದಲೂ ಹಾವುಗಳಿಂದಲೂ ಅಲಂಕೃತರಾದವರು, ಕಂಠದಲ್ಲಿ ಕಪ್ಪುಳ್ಳವರೂ, ಜಟಾಜೂಟವನ್ನು ಧರಿಸಿದವರು ಮತ್ತು ಮೌಳಿಯಲ್ಲಿ ಚಂದ್ರಕಲೆಯನ್ನುಳ್ಳವರು, ತೀಕ್ಷ್ಣವಾದ ಬಿಲ್ಲುಗಳನ್ನು ಹಿಡಿದ ಕೈಗಳುಳ್ಳವರು, ಮುಕ್ಕಣ್ಣರು, ರುದ್ರಾಕ್ಷಿಯ ಆಭರಣಗಳುಳ್ಳವರು, ನಮಸ್ಕಾರ ಮಾಡಿದವರನ್ನು ಭಯದಿಂದ ಕಾಪಾಡುವವರು...’ ಎಂಬುದು ರುದ್ರ ಪಾರಾಯಣ ಮಾಡುವವರು ಚಿಂತಿಸಬೇಕಾದ ಭಗವಂತನ ರೂಪ. ಜಗತ್ತಿನ ಎಲ್ಲೆಡೆಯೂ ರುದ್ರನನ್ನು ಗುರುತಿಸುವ ಭಾವ ನಮ್ಮನ್ನು ಆವರಿಸಿಕೊಳ್ಳಬೇಕು ಎನ್ನುವುದನ್ನು ಇದು ಒತ್ತಿ ಹೇಳುತ್ತದೆ.

ಶಿವನು ಚಂದ್ರನನ್ನು ತಲೆಯ ಮೇಲೆ ಹೊತ್ತಿರುವಂತೆ ನಾವು ಮತ್ತೊಬ್ಬರ ಒಳ್ಳೇ ಗುಣಗಳನ್ನು ಎತ್ತಿ ಆಡಬೇಕು, ಶಿವನು ವಿಷವನ್ನು ಕಂಠದಲ್ಲಿ ತಡೆದಿಟ್ಟುಕೊಂಡಿರುವಂತೆ ಮತ್ತೊಬ್ಬರ ಅವಗುಣಗಳನ್ನು ಗೌಪ್ಯವಾಗಿರಿಸಬೇಕು. ಶಿವನಿಗಿರುವ ಹಲವು ಕಣ್ಣುಗಳು ಅವನ ಪರಿಶೀಲನಾ ಸಾಮರ್ಥ್ಯವನ್ನು ಬಿಂಬಿಸುತ್ತದೆ. ಅದೇ ರೀತಿ ನಾವು ಸಹ ಸತ್ಯಕ್ಕಿರುವ ಹಲವು ಮುಖಗಳನ್ನು ಪರಿಶೀಲಿಸಿ, ಯಥೋಚಿತ ಅರಿಯಬೇಕು ಎನ್ನುವುದನ್ನು ಸಹ ಈ ರೂಪ ಸೂಚ್ಯವಾಗಿ ಬಿಂಬಿಸುತ್ತದೆ.

ರುದ್ರ ಅಥವಾ ಶಿವನ ಆಯುಧ ಎಂದು ತ್ರಿಶೂಲದ ಬದಲು ಇಲ್ಲಿ ಬಿಲ್ಲುಬಾಣವನ್ನು ವರ್ಣಿಸಿರುವುದು ಈ ಶ್ಲೋಕದ ಮತ್ತೊಂದು ವಿಶೇಷ.

## ಪ್ರಕೃತಿ-ಪರಮೇಶ್ವರ

ಎಲ್ಲವನ್ನೂ ಆವರಿಸಿಕೊಂಡಿರುವ ಮತ್ತು ಎಲ್ಲವೂ ಆಗಿರುವ ದೇವನ ವ್ಯಾಪ್ತೋಪಾಸನೆಯ ಅದ್ಭುತ ಸಾಧ್ಯತೆಯನ್ನು ರುದ್ರಸೂಕ್ತ ಕಟ್ಟಿಕೊಡುತ್ತದೆ. ಶಿವನು ನಮ್ಮ ಮಾತಿನಲ್ಲಿದ್ದಾನೆ. ಮಾತಿನ ಮೂಲಕ ಹೊರಬರುವ ಶಬ್ದವು, ಅದರ

